ದಿನಾಂಕಃ 11.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ ಎಸ್.ವಿ.ಡಿ ವಕೀಲರು ವಾದಿ ಪರ:**

ವಾದಿ ನನಗೆ ಸುಮಾರು 5-6 ವರ್ಷಗಳಿಂದ ಪರಿಚಯ. ವಾದಿ ಬಂಗಾರ ಅಂಗಡಿ ನಡೆಸುತ್ತಿದ್ದು, ನಾನು ಅವರ ಅಂಗಡಿಯಲ್ಲಿ ಬಂಗಾರ ಖರೀದಿ ಮಾಡುತ್ತಿದ್ದರಿಂದ ಆತನ ಪರಿಚಯವಾಗಿರುತ್ತದೆ. ನಾನು ವಾದಿಯ ಅಂಗಡಿಯಲ್ಲಿ 3-4 ಭಾರಿ ಬಂಗಾರ ಖರೀದಿಸಿರುತ್ತೇನೆ. ನಾನು ಕೊನೆಯ ಭಾರಿ 6 ವರ್ಷಗಳ ಹಿಂದೆ ವಾದಿಯ ಅಂಗಡಿಯಲ್ಲಿ 15 ಗ್ರಾಂ ಬಂಗಾರವನ್ನು ಅಂದಾಜು ರೂ.25-30 ಸಾವಿರ ಪ್ರತಿ ತೊಲೆಗೆ ಕೊಟ್ಟು ಖರೀದಿಸಿರುತ್ತೇನೆ. ನಾನು ಸುಮಾರು 10-12 ಭಾರಿ ನೊಂದಣಿ ಕಛೇರಿಗೆ ಹೋಗಿಬರಹುದು, ಆದರೆ ನಿಖರವಾಗಿ ಹೇಳಲು ಆಗುವುದಿಲ್ಲ. ನಾನು ಬೇರೆಯವರ ವ್ಯವಹಾರಕ್ಕಾಗಿ ಹಿರಿಯನಾಗಿ ಹೋಗುತ್ತಿದ್ದೆ. ನನಗೆ ನೊಂದಣಿ ಕಛೇರಿಯಲ್ಲಿ ನೊಂದ ಆಗುವ ಕಾಗದ ಪತ್ರಗಳ ಬಗ್ಗೆ ಚೆನ್ನಾಗಿ ತಿಳುವಳಿಕೆ ಇರುತ್ತದೆ ಎನ್ನುವ ಕಾರಣಕ್ಕಾಗಿ ಬೇರೆ ವ್ಯಕ್ತಿಗಳು ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನಗೆ ದಸ್ತುಬರಹಗಾರರ ಪರಿಚಯ ಸಹ ಚೆನ್ನಾಗಿ ಇರುತ್ತದೆ ಎಂದರೆ ಸರಿಯಲ್ಲ.

ಕಾಗದ ಪತ್ರಗಳನ್ನು ಬರೆಯುವಾಗ ವ್ಯವಹಾರ ಎಷ್ಟು ಮೊತ್ತಕ್ಕೆ ಆಗಿರುತ್ತದೆ ಹಾಗೂ ಎಷ್ಟು ಹಣವನ್ನು ಮುಂಗಡವಾಗಿ ಕೊಟ್ಟಿರುತ್ತಾರೆ ಎಂಬುವ ಬಗ್ಗೆ ಸಾಮಾನ್ಯವಾಗಿ ಹಿರಿತನ ಮಾಡಲು ಬಂದವರಿಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿಯು ಮಾತುಕತೆಯಾದ ಮಾತ್ರ ಗೊತ್ತಿರತ್ತದೆ. ಆದರೆ ಪತ್ರದಲ್ಲಿ ಎಷ್ಟು ಮೊತ್ತವನ್ನು ಬರೆದಿರುತ್ತಾರೆ ಎನ್ನುವ ಬಗ್ಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

ನಾನು ವಾದಿಯ ಅಂಗಡಿಯಲ್ಲಿ ಬಂಗಾರ ಖರೀದಿಸಿದ ಬಗ್ಗೆ ರಸೀಧಿಯನ್ನು ಪಡೆದಿರುತ್ತೇನೆ. ಸದರಿ ರಸೀಧಿಯನ್ನು ನಾನು ಖರಿದಿಸಿದ ಬಂಗಾರದ ಮೊತ್ತಕ್ಕೆ ಕೊಟ್ಟಿರುತ್ತಾರೆ. ನಾನು ವಾದಿಯ ತಂದೆಯಿಂದ ರೂ.2 ಲಕ್ಷ ಹಣವನ್ನು ಪಡೆದಿದ್ದು, ಅದನ್ನು ಮರುಪಾವತಿ ಮಾಡಿದ ಮೇರೆಗೆ ಖರೀದಿ ಕರಾರ ಪತ್ರವನ್ನು ರದ್ದತಿ ಮಾಡಿರುತ್ತಾರೆ. ಸದರಿ ಖರೀದಿ ಕರಾರ ಪತ್ರವನ್ನು ಎಷ್ಟು ಮೊತ್ತಕ್ಕೆ ಬರೆದುಕೊಂಡಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನನ್ನ ಹೇಳಿಕೆ ಮೇರೆಗೆ ತಯಾರಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದಿಯ ಅಂಗಡಿಯಲ್ಲಿ ಬಂಗಾರ ಖರೀದಿಸಿದ ಭದ್ರತೆಗಾಗಿ ಖರೀದಿ ಕರಾರ ಪತ್ರ ಬರೆದುಕೊಟ್ಟಿರುತ್ತೇನೆಂದು ಹೇಳಿ ಬರೆಸಿರುವುದಿಲ್ಲ. ವಾದಿಯ ತಂದೆಯಿಂದ ರೂ.2 ಲಕ್ಷ ಹಣವನ್ನು ಪಡೆದಿದ್ದು, ಅದನ್ನು ಮರುಪಾವತಿ ಮಾಡಿದ ಮೇರೆಗೆ ಅದರ ಭದ್ರತೆಗಾಗಿ ಬರೆದುಕೊಟ್ಟ ಖರೀದಿ ಕರಾರ ಪತ್ರವನ್ನು ರದ್ದತಿ ಮಾಡಿಕೊಂಡಿರುವುದಾಗಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ.

ನಿಪಿ.2 ರಂತೆ ಖರೀದಿ ಕರಾರ ಪತ್ರ ಬರೆಸಿಕೊಳ್ಳುವ ಸಮಯದಲ್ಲಿ ವಾದಿ ಮತ್ತು ನನ್ನ ಮಧ್ಯ ಯಾವುದೇ ವ್ಯವಹಾರ ಇರದೇ ಇದ್ದರೂ ಸಹ ಆತನ ಭಾವಚಿತ್ರವನ್ನು ಏಕೆ ತೆಗೆದುಕೊಳ್ಳುತ್ತಿದ್ದೀರಿ ಎಂದು ನಿಪಿ.2 ರ ನೊಂದಣಿ ಕಾಲಕ್ಕೆ ನಾನು ಪ್ರಶ್ನಿಸಿರುವುದಿಲ್ಲ, ಏಕೆಂದರೆ ಆಗ ನನಗೆ ಗೊತ್ತಾಗಲಿಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು ಆತನ ತಂದೆ ನನಗೆ ಮೋಸ ಮಾಡಿ ನಿಪಿ.2 ರಂತೆ ಪತ್ರ ಬರೆಸಿಕೊಂಡಿರುವ ವಿಷಯ ನನಗೆ ನೋಟಿಸನ್ನು ಕಳಿಸಿದ ನಂತರವೇ ಗೊತ್ತಾಗಿರುತ್ತದೆ.

ನೀವು ಸದರಿ ನೋಟಿಸಿಗೆ ಪ್ರತ್ಯುತ್ತರ ನೀಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಸದರಿ ವಿಚಾರವನ್ನು ನಮ್ಮ ವಕೀಲರಿಗೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಯು ಮೋಸದಿಂದ ಕರಾರ ಪತ್ರವನ್ನು ಬರೆಸಿಕೊಂಡಿರುತ್ತಾನೆಂದು ಹೇಳಿ ಪೋಲಿಸ್ ಠಾಣೆಗೆ ದೂರು ಕೊಟ್ಟಿರುವುದಿಲ್ಲ. ಠಾಣೆಗೆ ಹೋಗಿ ದೂರು ಕೊಡಲು ನನಗೆ ತೊಂದರೆ ಇರಲಿಲ್ಲ.

ಅಸಲ ದಾವಾ ನಂ.129/2022 ರಲ್ಲಿ ಇದೇ ನ್ಯಾಯಾಲಯದಲ್ಲಿ ಕಸ್ತೂರಿ ಶ್ಯಾಂಭದ್ರಿ ರವರು ನಾನು ಖೊಟ್ಟಿಯಾಗಿ ಖರೀದಿ ಪತ್ರ ಮಾಡಿಕೊಂಡಿರುತ್ತೇನೆಂದು ಪ್ರಕರಣ ದಾಖಲಿಸಿರುತ್ತಾಳೆ ಎಂದರೆ ನಿಜ. ನಾನು ವೈಯಕ್ತಿಕವಾಗಿ ಸುಮಾರು 7-8 ಕಾಗದ ಪತ್ರಗಳನ್ನು ನೊಂದಣಿ ಕಛೇರಿಯಲ್ಲಿ ನೊಂದ ಮಾಡಿಸಿಕೊಂಡಿರುತ್ತೇನೆ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
2ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ